OCTOBER 20, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಇಂದು ಮಹಾನವಮಿ** ಹಾಗೂ ಆಯುಧ ಪೂಜೆ. ಶರನ್ನವರಾತ್ರಿಯ, ಒಂಬತ್ತನೆ ದಿನವಾದ ಇಂದು, ಸಿದ್ಧಿದಾತ್ರಿ ದೇವಿಯ ಉಪಾಸನೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ, ನವರಾತ್ರಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

<><><>

**ಬೀದರಿನಲ್ಲಿ ನವರಾತ್ರಿ ಹಾಗೂ** ವಿಜಯ ದಶಮಿ ಹಬ್ಬದ ಅಂಗವಾಗಿ, ರಾಮಲೀಲಾ ಉತ್ಸವ ಸಮಿತಿ ವತಿಯಿಂದ, ಎರಡು ದಿನಗಳ ರಾಮಲೀಲಾ ಉತ್ಸವ, ಸಂಭ್ರಮದಿಂದ ನಡೆಯಲಿದೆ. 46 ಅಡಿ ಎತ್ತರದ, ರಾವಣನ ಪ್ರತಿಕೃತಿ ದಹಿಸಿ, ಬಾನಂಗಳದಲ್ಲಿ ಪಟಾಕಿ ಸಿಡಿಸಿ, ಸಂಭ್ರಮಿಸಲಾಗುತ್ತಿದೆ.

<><><>

**ಕಲಬುರಗಿ ಜಿಲ್ಲೆಯಲ್ಲಿ,** ಸಾರ್ವಜನಿಕ ಗಣೇಶೋತ್ಸವದ ಮಾದರಿಯಲ್ಲಿ, ದೇವಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, 9 ದಿನಗಳ ಕಾಲ, ಶ್ರದ್ಧಾ–ಭಕ್ತಿಯಿಂದ ಆಚರಿಸುವುದು, ವಿಶೇಷ.

<><><>

**ಯಾದಗಿರಿ ಜಿಲ್ಲೆ, ಸುರಪುರದ, ಗೋಸಲ ವಂಶಸ್ಥ** ಅರಸು ಮನೆತನದ, ರಾಜಾ ಕೃಷ್ಣಪ್ಪ ನಾಯಕ ಅವರ ನೇತೃತ್ವದಲ್ಲಿ, ಮೈಸೂರು ಮತ್ತು ತಿರುಪತಿ ಮಾದರಿಯಲ್ಲಿ, ದಸರಾ ಉತ್ಸವಗಳನ್ನು, ವಿಜೃಂಭಣೆಯಿಂದ, ಆಚರಿಸಲಾಗುತ್ತಿದೆ.

<><><>

**ಮುಸ್ಲಿಂ ಸಮುದಾಯದ,** ಅಜೀಂ ಮನೆತನದವರು, ಮಹಾರಾಜರಿಗೆ ಮಾರ್ಗದುದ್ದಕ್ಕೂ, ಬೆಂಗಾವಲಾಗಿ, ಬೆಳ್ಳಿ ಬೆತ್ತ ಹಿಡಿದು, ವಂದಿಮಾಗಧರಾಗುವುದು, ವಿಶೇಷ.

<><><>

**ಕಿತ್ತೂರು ಕರ್ನಾಟಕ ಭಾಗದ,** ಬೆಳಗಾವಿಯಲ್ಲಿ, ಸರ್ವ ಭಾಷಿಕರು, ಸರ್ವ ಧರ್ಮೀಯರೂ ಸೇರಿ, ಸೌಹಾರ್ದದಿಂದ ದಸರಾ ಆಚರಿಸುತ್ತಾರೆ.

<><><>

**ನಾಳೆ, ವಿಜಯದಶಮಿಯ ದಿನ,** ವತನದಾರ್ ಪೊಲೀಸ್ ಪಾಟೀಲ ಮನೆತನದ ನೇತೃತ್ವದಲ್ಲಿ, ಕ್ಯಾಂಪ್ ಪ್ರದೇಶದ, ವಿದ್ಯಾನಿಕೇತನ ಶಾಲೆ ಮೈದಾನದಲ್ಲಿ, ಸೀಮೋಲ್ಲಂಘನ ನಡೆಯಲಿದೆ.

<><><>

**ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು,** ಸಾವಳಗಿ ಪೀಠದಲ್ಲಿ, ಶ್ರೀ ಶಿವಲಿಂಗೇಶ್ವರ ಕುಮಾರೇಂದ್ರ ಸ್ವಾಮೀಜಿ, ಹಸಿರು ಪೋಷಾಕು ಧರಿಸಿ, ಸೀಮೋಲ್ಲಂಘನೆ ಮೂಲಕ, ನಾಳೆ ಬನ್ನಿ ಮುಡಿಯಲಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆ,** ಶೃಂಗೇರಿಯ ಶ್ರೀ ಶಾರದಾಂಬಾ ಪೀಠದಲ್ಲಿ, ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ, ರತ್ನ ಖಚಿತ ಕಿರೀಟ, ಆಭರಣಗಳನ್ನು ಧರಿಸಿ, ರಾಜ ಪೋಷಾಕಿನಲ್ಲಿ, 12 ದಿನಗಳ ಕಾಲ, ದರ್ಬಾರು ನಡೆಸುತ್ತಿರುವುದು, ವಿಶೇಷ.

<><><>

**ದಕ್ಷಿಣಕನ್ನಡ ಜಿಲ್ಲೆಯಲ್ಲಿ,** 'ಮಾರ್ನೆಮಿ' ನವರಾತ್ರಿ ಹಬ್ಬ, ಸಂಭ್ರಮದಿಂದ ನಡೆಯುತ್ತದೆ. ನಾಳೆ ವಿಜಯ ದಶಮಿ ದಿನ, ಹುಲಿ ವೇಷಧಾರಿಗಳ – ಪಿಲಿ ಕುಣಿತದಿಂದ, ಕೊನೆಗೊಳ್ಳುತ್ತದೆ. ಹುಲಿ ವೇಷ ಕಟ್ಟುವ ಹಿಂದುಗಳಿಗೆ, ಕ್ರೈಸ್ತರು, ಮುಸಲ್ಮಾನರು, ಸಹಕಾರಿಯಾಗುವುದು ವಿಶೇಷ.

<><><>

**ತುಮಕೂರು ಜಿಲ್ಲೆ, ತಿಪಟೂರು ತಾಲೂಕು,** ದಸರೀಘಟ್ಟದ, ಆದಿಚುಂಚನಗಿರಿ ಶಾಖಾ ಮಠದ, ಚೌಡೇಶ್ವರಿ ದೇವಿಯ, ಮುಳ್ಳುಗದ್ದಿಗೆ ಉತ್ಸವ, ಆಳೆತ್ತರದ ಗಟ್ಟಿಕಾರೆ ಮುಳ್ಳಿನ ರಾಶಿಯ ಮೇಲೆ, ವೈಭವದಿಂದ ನೆರವೇರಲಿದೆ. ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಉತ್ಸವದ ಸಾನಿಧ್ಯ ವಹಿಸುವುದು ವಿಶೇಷ.

<><><>

**ಸಾಮರಸ್ಯದ ಸಾರವಾದ,** ದಸರಾ ಮತ್ತು ವಿಜಯದಶಮಿ ಹಬ್ಬದ, ವಿಶಿಷ್ಟ ಆಚರಣೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಖ್ಯಾತ ಜಾನಪದ ವಿದ್ವಾಂಸ, ಡಾಕ್ಟರ್ ರಾಮಣ್ಣ ಮೂಲಗಿ.

<><><>

**ಡಾ. ರಾಮಣ್ಣ ಮೂಲಗಿ ಧ್ವನಿ 40 ಸೆಕೆಂದುಗಳು**

<><><>

**ವಿಶ್ವ ವಿಖ್ಯಾತ, ನಾಡಹಬ್ಬ** ಮೈಸೂರು ದಸರಾ ಮಹೋತ್ಸವದ, ಪ್ರಮುಖ ಆಕರ್ಷಣೆ, ಜಂಬೂಸವಾರಿ, ನಾಳೆ ವಿಜಯದಶಮಿಯಂದು, ಅದ್ದೂರಿಯಾಗಿ ನಡೆಯಲಿದೆ.಼ ನಾಳೆ ಮಧ್ಯಾಹ್ನ 1 ಗಂಟೆ 36 ನಿಮಿಷದಿಂದ, 1 ಗಂಟೆ 56 ನಿಮಿಷಗಳ ವರೆಗೆ, ಮೈಸೂರು ಅರಮನೆಯ, ಬಲರಾಮ ದ್ವಾರದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ನಂದಿಧ್ವಜ ಪೂಜೆ ನೆರವೇರಿಸಲಿದ್ದಾರೆ. ಸಂಜೆ 4 ಗಂಟೆ 10 ನಿಮಿಷದಿಂದ, 4 ಗಂಟೆ 35 ನಿಮಿಷಗಳ ವರೆಗೆ, ಅಂಬಾವಿಲಾಸ ಅರಮನೆ ಆವರಣದಲ್ಲಿ, ಗಜ ಪಡೆಯ ಹೊಸ ಆನೆ, ಪ್ರಶಾಂತ ಹೊರಲಿರುವ, 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನ, ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ, ಜಂಬೂಸವಾರಿಗೆ, ವಿಧ್ಯುಕ್ತ ಚಾಲನೆ, ನೀಡಲಿದ್ದಾರೆ.

<><><>

**ಜಪಾನ್‌ನಲ್ಲಿ ನಡೆದ, 2026ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ,** ಚಾಮರಾಜನಗರದ, 16 ವರ್ಷದ ಕ್ರೀಡಾಪಟು ಸೌಮ್ಯಾ, ಮಹಿಳೆಯರ ಸಾವಿರದ 500 ಮೀಟರ್ ಟಿ 12 – ಟಿ 13 ಸ್ಪರ್ಧೆಯಲ್ಲಿ, 5 ನಿಮಿಷ, 12 ಸೆಕೆಂದು ಹಾಗೂ 39 ಮಿಲಿ ಸೆಕೆಂದುಗಳಲ್ಲಿ ಗುರಿ ತಲುಪಿ, ಚಿನ್ನದ ಪದಕ ಮುಡಿಗೇರಿಸಿಕೊಂಡರು. ಉಪ ಮುಖ್ಯಮಂತ್ರಿ ಹಾಗೂ ಕ್ರೀಡಾ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ, ಎಲ್ಲರನ್ನೂ ಅಭಿನಂದಿಸಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**